International Journal of Kannada Research 2018; 4(3): 96-97

International Journal of Kannada Research
www.kannadajournal.com

**ISSN: 2454–5813**
IJKR 2018; 4(3): 96-97
© 2018 IJKR
www.kannadajournal.com
Received: 20-05-2018
Accepted: 21-06-2018

**Vijayakumar B**
Researcher, Department of Kannada Language and Translation Studies, Dravidian University, Srinivasa Vanam, Kuppam, Andhra Pradesh, India

**Correspondence**
**Vijayakumar B**
Researcher, Department of Kannada Language and Translation Studies, Dravidian University, Srinivasa Vanam, Kuppam, Andhra Pradesh, India

# ಜನಪದ ಗೀತೆಗಳ ಚಲನಶೀಲತ

## Vijayakumar B

ಜನಪದ ಎಂಬುದು ಒಂದು ಜೀವಂತ ವಸ್ತು ಎಲ್ಲಿ ಜೀವಂತಿಕೆಯಿರುತ್ತದೆಯೊ ಅಲ್ಲಿ ಚಲನಶೀಲತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ಜನಪದವು ನಿರಂತರವಾಗಿ ಹರಿವ ನದಿಯಂತೆ ಕಾಣುತ್ತದೆ. ನದಿ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ತನ್ನ ಹೊರಮೈ ವಿನ್ಯಾಸದಲ್ಲಿ ವ್ಯತ್ಯಾಸವನ್ನು ತೋರುವಂತೆ ಜನಪದವೂ ಹಾಗೆ ತನ್ನ ವ್ಯತ್ಯಾಸವನ್ನು ತೋರುತ್ತದೆ ಇದನ್ನು ಸಾಕ್ಷೀಕರಿಸಲು ಜನಪದದ ಹಲವು ಭಾಗಗಳಾದ ಜನಪದ ಗೀತೆಗಳನ್ನು ಇಲ್ಲಿ ಅನುಲಕ್ಷಿಸಲಾಗಿದೆ.
ಒಂದು ನಿರ್ದಿಷ್ಟ ವಸ್ತುವನ್ನು ಕೇಂದ್ರೀಕರಿಸಿದ ಜನಪದ ಗೀತೆಯು ಪ್ರದೇಶದಿಂದ ಪ್ರದೇಶಕ್ಕೆ, ಕಾಲದಿಂದ ಕಾಲಕ್ಕೆ ವ್ಯತ್ಯಾಸವನ್ನು ತೋರುವುದು. ಇಲ್ಲಿ ಈ ಗೀತೆಯ ಕರ್ತೃ ಹಿಂದೆ ಯಾರೋ ಒಬ್ಬರು ಇರಬಹುದು ಅಥವಾ ಅದು ಸಾಮಾಜಿಕ ಸೃಷ್ಟಿಯೂ ಆಗಿರಬಹುದು. ಅಂತಹ ರಚನೆಯೊಂದು ನಿರಂತರವಾಗಿ ಸಾಮೂಹಿಕ ಪುನರ್‌ಸೃಷ್ಟಿಗೆ ಒಳಗಾಗುತ್ತಿರುತ್ತದೆ. ಕಾಲ, ಪ್ರದೇಶ, ಸಂದರ್ಭ ಇತ್ಯಾದಿ ಅಂಶಗಳು ಅದರ ಭಿನ್ನ ಪಾಠಗಳಿಗೆ ಕಾರಣೀಭೂತವಾಗಿರುತ್ತವೆ. ಈ ಪ್ರವಾಹಕ್ಕೆ ಆದಿಯನ್ನು ಗುರುತಿಸುವುದು ಹೇಗೆ ಅಸಾಧ್ಯವೋ ಹಾಗೆಯೇ ಅದರ ಅಂತ್ಯವನ್ನು ಗುರುತಿಸುವುದು ಸಹ ಅಸಾಧ್ಯವೇ ಆಗಿರುತ್ತದೆ. ಹಾಗಾಗಿ ಇದರ ಹರಿವು ಅನಂತವಾದುದು. ಈ ತಾತ್ವಿಕ ನೆಲೆಯಲ್ಲಿ ಒಂದೆರಡು ಜನಪದ ಗೀತೆಗಳನ್ನು ಇಲ್ಲಿ ಚರ್ಚಿಸಲಾಗಿದೆ.

*ಮೂಡಲು ಕುಣಿಗಲು ಕೆರೆ ನೋಡೋರ್ ಗೊಂದ್ಯೆಭೋಗ*
*ಮೂಡಿ ಬರ್ತಾನೆ ಚಂದಿರಮಾ / ತಾನಂದನೋ*
*ಮೂಡಿ ಬರ್ತಾನೆ ಚಂದಿರಮಾ*
(ಮತಿಘಟ್ಟ ಕೃಷ್ಣಮೂರ್ತಿ (ಸಂ.); 1975; ಪುಟ 234)

ಇದರ ಇನ್ನೂ ಕೆಲವು ಪಾಠಗಳು ಹೀಗಿವೆ.

*ಮೂಡಲ ಕುಣಗಲು ಕೆರೆ ಹೋಗಿ ನೋಡಾನ ಬನ್ನಿ*
*ಮೂಡಿಬರುವಾನು ಚಂದಿರಾಮೊ ತಾನಂದನ್ನಾ*
*ಮೂಡಿಬರುವೊ ಚಂದಿರಾಮ್ನ ಕೊಳದಲ್ಲಿ*
*ಕಾಡುಮೇಡೆಲ್ಲ ಜಲದಿಬ್ಬು ತಾನಂದನ್ನಾ*
*ಕಾಡುಮೇಡೆಲ್ಲ ಜಲದಿಬ್ಬು ಗೇಂಡೇಮೀನು*
*ವಾಲಾಡುತಾಳೆ ಶಿವಗಂಗ್ಯೋ ತಾನಂದನ್ನಾ*
(ನಾಗೇಗೌಡ ಹೆಚ್.ಎಲ್ (ಸಂ.); 1976; ಪುಟ 336)

*ರಾಜಕುಣಿಗಲ್ ಕೆರೆ ನೋಡೋರಿಗ್ಗೊಂದಾಳ*
*ಎಲ್ಲಿ ಮೂಡಿ ಬರುವೋನು ಚಂದಿರಾಮ.... ತಂದನಾನ/*
(ಕ.ರಾ. ಕೃಷ್ಣಮೂರ್ತಿ (ಸಂ.); 1983 ಎರಡನೇ ಮುದ್ರಣ; ಪುಟ 18)

*ಮೂಡಲ್ ಮುತ್ತಿನ ಕೆರೆ ನೋಡೋರಿಗೊಂದೈಭೋಗ*
*ಮೂಡಿ ಬರ್ತಾನೆ ಚಂದ್ರಾಮ । ತಾನಂದನ*
*ಮೂಡಿ ಬರ್ತಾನೆ ಚಂದ್ರಾಮ*
(ಗೊರೂರು ರಾಮಸ್ವಾಮಿ ಅಯ್ಯಂಗಾರ್; 2009; ಪುಟ 27)

ಇಲ್ಲಿ ಮೊದಲ ಪದ್ಯದಲ್ಲಿ 'ಕುಣಿಗಲ್ ಕೆರೆ'ಯ ಪ್ರಸ್ತಾಪವಿದ್ದರೆ, ಎರಡನೆಯ ಪದ್ಯದಲ್ಲಿ ಸಾಮಾನಾರ್ಥದ ನೆಲೆಯಲ್ಲಿ ಕಾಣಬಹುದಾದ 'ಮುತ್ತಿನ ಕೆರೆ'ಯ ಪ್ರಸ್ತಾಪವಿದೆ. ಅಂತೆಯೇ ದೊಡ್ಡ ವ್ಯತ್ಯಾಸವಲ್ಲದ ಚಂದಿರಾಮ ಎಂಬ ಪದ ಮೊದಲ ಪದ್ಯದಲ್ಲಿದ್ದರೆ 'ಚಂದ್ರಾಮ' ಎಂಬ ಪದ ಎರಡನೆಯ ಪದ್ಯದಲ್ಲಿದೆ. ಇಂತಹ ಪದ ವ್ಯತ್ಯಾಸಗಳು ಶಿಷ್ಟ ಕವಿತೆಗಳಲ್ಲಿ ಬಹುತೇಕ ಅಸಾಧ್ಯ. ಆ ಶಿಷ್ಟಕವಿ ಅಲ್ಲಿ ಉದ್ದೇಶ ಪೂರ್ವಕವಾಗಿ ಪಾಠಾಂತರ ಮಾಡಿರಬಹುದು; ಅಥವಾ ಸಾಹಿತ್ಯದ ಸಮಸ್ಯೆಯಲ್ಲಿ ಅದು ಸಂಭವಿಸಿರಬಹುದು. ಆದರೆ ಜನಪದ ಗೀತೆಯಲ್ಲಿ ಸಾಮೂಹಿಕ ಸೃಷ್ಟಿಯಲ್ಲಿ ಉಂಟಾಗುವಂತೆ ಪಾಠಾಂತರ ಇಲ್ಲಿ ಅಸಾಧ್ಯ.
ಈ ಹಿನ್ನೆಲೆಯಲ್ಲಿ ಇಲ್ಲಿ ಕಂಡು ಬಂದಿರುವ ಪಾಠಾಂತರಗಳು ಯಾವ ಪ್ರದೇಶಗಳಲ್ಲಿ, ಯಾವ ಕಾಲಗಳಲ್ಲಿ ಸಂಭವಿಸಿದವು ಎಂಬ ಪ್ರಶ್ನೆ ಇಲ್ಲಿ ಏಳುವುದು ಸಾಧ್ಯ. ಅದಕ್ಕೆ ನೇರವಾಗಿ ಕ್ಷೇತ್ರಕಾರ್ಯಕ್ಕೆ ತೊಡಗಿದಾಗ ಕೊಂಚ ಉತ್ತರ ಸಿಗಬಹುದು. ಅಂತೆಯೇ ಈಗಾಗಲೇ ಮುದ್ರಣಗೊಂಡ ಪುಸ್ತಕಗಳನ್ನು ಆಧರಿಸಿ, ಈ ಪಾಠಾಂತರಗಳನ್ನು ಪ್ರಸ್ತಾಪಿಸಿದಾಗ, ಆಯಾ ಕೃತಿಗಳ ವಕ್ತೃ, ಸಂಪಾದಕರ ವಿವರಗಳನ್ನಷ್ಟೇ ನೀಡುವುದು ಶಕ್ಯ. ಈ ಹಿನ್ನೆಲೆಯಲ್ಲಿ ಪ್ರಸ್ತಾವಿತ ಮೊದಲ ಪದ್ಯವು ಪುಟ–234, ಕನ್ನಡ ಜನಪದ ಸಾಹಿತ್ಯ ಭಂಡಾರ, ಸಂಪಾದಕರು; ಮತಿಘಟ್ಟ ಕೃಷ್ಣಮೂರ್ತಿ, ಪ್ರಕಟಣೆ: 1975 ಇಲ್ಲಿ ಕಂಡು ಬರುತ್ತದೆ. ವಾಸ್ತವವಾಗಿ ಈ ಕೃತಿ ಹಾಸನ ಪರಿಸರದಲ್ಲಿ ಸಂಗ್ರಹ ಮಾಡಿದ 'ಗೀತೆಗಳು' ಎಂಬ ಬೃಹತ್ ಸಂಪುಟದಿಂದ ಆಯ್ದ ಗೀತೆಗಳ ಜನಪ್ರಿಯ ಸಂಕಲನ ಅಥವಾ ಆವೃತ್ತಿಯಾಗಿದೆ. ಉಳಿದಂತೆ ಪ್ರಸ್ತಾಪಿತ ಪದ್ಯದ ಎರಡನೆಯ ಸಾಲನ್ನು ಪುಟ–336, ಪದವವೆ ನಮ್ಮ ಎದೆಯಲ್ಲಿ, ಸಂಪಾದಕರು; ನಾಗೇಗೌಡ ಹೆಚ್.ಎಲ್., ಮೂರನೇ ಸಾಲು ಪುಟ–18, ಜನಪ್ರಿಯ ಜನಪದ ಗೀತೆಗಳು, ಸಂಪಾದಕರು; ಕರಾಕೃ, ಪ್ರಕಟಣೆ ಎರಡನೆಯ ಮುದ್ರಣ 1983 ಹಾಗೂ ನಾಲ್ಕನೆಯ ಸಾಲು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸಂಪಾದಿಸಿರುವ 'ಹಳ್ಳಿಯ ಹಾಡುಗಳು' ಕೃತಿಯಲ್ಲಿ ನೋಡಬಹುದಾಗಿದೆ. ಇದರ ಕ್ಷೇತ್ರಕಾರ್ಯವು ಅಲೂರು, ಮೈಸೂರು, ನಂಜನಗೂಡು ಮುಂತಾದ ಪ್ರದೇಶಗಳಲ್ಲಿ ನಡೆದಿದೆ. ಇದರ ಪ್ರಕಟಣೆ 1938ರಲ್ಲಿ ಆಗಿದೆ.

ಹೀಗೆ ಭಿನ್ನ ಪಾಠಗಳಲ್ಲಿ ಮೈತಳೆದ ಪ್ರಸ್ತುತ ಪಠ್ಯದಂತೆ ಈ ಕೆಳಕಂಡ ಪಠ್ಯಗಳು ಸಹ ಇವೆ.

1) *ಮದ್ಯಲು ನೆನೆದೇವೆ ಸ್ವಾಮಿ ಲಿಂಗನಾ*
*ಸನುಮತ ಶಿವಗಂಗೆ ಬೆನ್ನವನಾ*
(ಮತಿಘಟ್ಟ ಕೃಷ್ಣಮೂರ್ತಿ (ಸಂ.); 1991; ಪುಟ 27)

*ಮದ್ಯಲು ನೆನೆದೆವು ಗಜಮುಖದಯ್ಯನಾ*
*ಸೊಬಗಿನ ಸರಸ್ವತಿ ಬೆನ್ನವನಾ*
*ಬೆನವ್ವನ ನೆನೆದರೆ ಘನಮನವಾದಿತು*
*ಕೊಡುಸ್ವಾಮಿ ಕೋಲಿನ ಪದಗಳನಾ*
(ಮತಿಘಟ್ಟ ಕೃಷ್ಣಮೂರ್ತಿ (ಸಂ.); 1991; ಪುಟ 28)

2) *ಏಳುತಾಲೇ ಎದ್ದು ಯಾರ್ಯಾರ ನೆನೆಯಾಲಿ*
*ಎಳ್ಳು ಜೀರಿಗೆ ಬೆಳೆಯೋಳಾ, ಭೂಮಿತಾಯಿ*
*ಎದ್ದೊಂದು ಗಳಿಗೆ ನೆನೆದೇನು*
(ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಸಂ.); 2009; ಪುಟ 1)

*ಏಳುತಾಲೇ ಶ್ರೀಗಿರಿಯ ಏನೆಂದು ನೆನೆದಾಳೊ*
*ಪಾರ್ವತಿ ಪಾದ ಗತಿಯೆಂದು । ಮಲ್ಲವ್ವ*
*ತಲೆಯಾಗೆ ಹಸ್ತ ಮಡಗ್ಯಾಳೋ*
(ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಸಂ.); 2009; ಪುಟ 14)

ಹೀಗೆ ನಿರ್ದಿಷ್ಟ ಪಠ್ಯ ಕೇಳುತ್ತ, ಹಲವು ಪಾಠಗಳನ್ನು ಜನಪದ ಗೀತೆಗಳ ಚಲನಶೀಲತೆಗೆ ಸಾಕ್ಷೀಕರಿಸುತ್ತಾ ಹೋಗಬಹುದು. ಇಂತಹ ನಡಿಗೆ ಆರಂಭವಿದೆಯೇ ವಿನಹಾ ಅಂತ್ಯವಿಲ್ಲ. ಕಾರಣ, ಈಗಾಗಲೇ ಪ್ರಸ್ತಾಪಿಸಿರುವಂತೆ ಜನಪದ ಎಂಬುದು ಅವಿನಾಶಿ ಮತ್ತು ನಿತ್ಯನೂತನ.

**ಗ್ರಂಥಋಣ**


1. ಕ.ರಾ.ಕೃಷ್ಣಮೂರ್ತಿ (ಸಂ.), ಎರಡನೆಯ ಮುದ್ರಣ 1983, ಜನಪ್ರಿಯ ಜಾನಪದ ಗೀತೆಗಳು, ಜನಪದ ಅಕಾಡೆಮಿ, ಬೆಂಗಳೂರು
2. ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಸಂ.), 2009, ಹಳ್ಳಿಯ ಹಾಡುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
3. ನಾಗೇಗೌಡ ಹೆಚ್. ಎಲ್. (ಸಂ.), 1976, ಪದವವೇ ನಮ್ಮ ಎದೆಯಲ್ಲಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
4. ಮತಿಘಟ್ಟ ಕೃಷ್ಣಮೂರ್ತಿ (ಸಂ.), 1975, ಕನ್ನಡ ಜನಪದ ಸಾಹಿತ್ಯ ಭಂಡಾರ, ಗುರುಮೂರ್ತಿ ಪ್ರಕಾಶನ, ಬೆಂಗಳೂರು
5. ಮತಿಘಟ್ಟ ಕೃಷ್ಣಮೂರ್ತಿ (ಸಂ.), 1991, ಹೊನ್ನ ಹೊತ್ತಿಗೆ, ಬೆಂಗಳೂರು